ಶ್ರೀ ಕೆ. ಶ್ರೀನಿವಾಸಗೌಡ ಕುದವನಹಳ್ಳಿ :— ಮಾನ್ಯ ಅಧ್ಯಕ್ಷರೇ, ಮಾಯಾ ಬಜಾರ್ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿದ್ದರಲ್ಲ? ಈ ಮಾಯಾ ಹೆಂಡಕ್ಕೂ ಅದಕ್ಕೂ ಸಂಬಧವಿದೆಯೇ? ಹೇಳುವಿರಾ?

ಶ್ರೀ ಹಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಈ ಕಡೆ ಇದ್ದಾಗ ಸೆಕೆಂಡ್ಸ್ ಬಗ್ಗೆ ಭಾರಿ ವ್ಯಾಖ್ಯಾನ ಮಾಡುತ್ತಾ ಇದ್ದರು. ಆ ಕಡೆಗೆ ಹೋದಮೇಲೆ ಆ ವಿಚಾರವನ್ನು ಬಿಟ್ಟುಬಿಟ್ಟಿದ್ದಾರೆ.

ಶ್ರೀ ಆರ್. ರೋಷನ್ ಬೇಗ್ (ಮಾನ್ಯ ಪ್ರವಾಸ್ಯೋದ್ಯಮ ಮತ್ತು ವಕ್ಫ್ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರವನ್ನು ಸಂಬಂಧಪಟ್ಟ ಮಾನ್ಯ ಸಚಿವರ ಗಮನಕ್ಕೆ ತಂದು ಸೂಕ್ತ ಕ್ರಮ ಜರುಗಿಸಲು ಕೇಳಿಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್ :— ಇದು ತುಂಬ ಗಂಭೀರವಾದ ವಿಚಾರ. ಅಲ್ಲಿ ೬೯ ಜನರು ಸತ್ತಿದ್ದಾರೆ. ಆ ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ, ಸಂಬಂಧಪಟ್ಟವರಿಗೆ ದೂರು ಕೊಡಲಾಗಿದೆ. ಇದರ ಬಗ್ಗೆ ಒಂದು ತನಿಖೆಯನ್ನು ನಡೆಸಿ ಕ್ರಮ ಜರುಗಿಸಬೇಕು. ಅಲ್ಲಿ ಸತ್ತವರೆಲ್ಲ ಪರಿಶಿಷ್ಟ ವರ್ಗದವರು. ಆ ಬಗ್ಗೆ ಗಮನಕೊಡಬೇಕು.

ಶ್ರೀ ಹಾಗೋಡು ತಿಮ್ಮಪ್ಪ (ಮಾನ್ಯ ಸಮಾಜಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೂಡ ಈ ವಿಚಾರದಲ್ಲಿ ಸಹಾಯ ಮಾಡಬೇಕು. ನಾನು ನಮ್ಮ ಇಲಾಖಾ ಅಧಿಕಾರಿಗಳನ್ನು ಕಳುಹಿಸಿಕೊಡುತ್ತೇನೆ. ಅಲ್ಲಿ ಒಂದು ಆಫೇರ್‌ನೆಸ್ ಕ್ಯಾಂಪೇಸ್ ಮಾಡೋಣ. ತಾವುಗಳು ಆಸಕ್ತಿ ಮಹಿಸಿದರೆ ನಾನು ಕೂಡ ಬರುತ್ತೇನೆ. ನಮ್ಮ ಅಧಿಕಾರಿಗಳು ನಿಮ್ಮನ್ನು ಕಾಂಟಾಕ್ಟ್ ಮಾಡುತ್ತಾರೆ, ನೀವು ಸಹಕಾರ ಕೊಡಿ. ಆಗಿರುವ ಘಟನೆ ಬಗ್ಗೆ ತನಿಖೆ ಮಾಡಿಸೋಣ.

(vi) ಮುಂಡರಗಿ ತಾಲ್ಲೂಕು ಹಮಗಿ ಗ್ರಾಮದಲ್ಲಿ ಕುಡುಕರ ಕಾಟ

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಅಧ್ಯಕ್ಷರೇ, ಹೋದ ವಾರದಲ್ಲಿ ಈ ವಿಚಾರದ ಬಗ್ಗೆ ಸ್ವಲ್ಪ ಮಟ್ಟಿನ ಚರ್ಚೆಯಾಗಿದೆ. ನಮ್ಮ ಮುಂಡರಗಿ ತಾಲ್ಲೂಕು ಹಮಗಿ ಗ್ರಾಮದಲ್ಲಿ ಕುಡುಕರ ಕಾಟ ತಾಳಲಾರದಾಗಿದೆ. ಗದಗ ತಾಲ್ಲೂಕಿನ ಈ ಊರಿನ ಎಲ್ಲಾ ಹೆಣ್ಣುಮಕ್ಕಳು ಒಂದಾಗಿ ಕುಡುಕ ಗಂಡರ ಕಾಟ ತಾಳಲಾರದೆ ಒಂದು ಕ್ರಮವನ್ನು ಕೈಗೊಂಡರು. ಭಾಗ್ಯಲಕ್ಷ್ಮಿ ಮಹಿಳಾ ಮಂಡಳ ಹಾಗೂ ಮಹಿಳಾ ಸಮುದಾಯ ಗುಂಪುಗಳು ಮತ್ತು ಮದ್ಯಪಾನ ನಿರ್ಮೂಲನಾ ಸಮಿತಿ - ಇವರುಗಳೆಲ್ಲರೂ ಸೇರಿಕೊಂಡು ಈ ಊರಿನ ಎಲ್ಲ ಮದ್ಯಪಾನದ ಅಂಗಡಿಗಳನ್ನು ಮುಚ್ಚಿಸಬೇಕು, ಊರಿನಲ್ಲಿ ಯಾರೂ ಕುಡಿಯಬಾರದು ಎಂದು ಒಂದು ತೀರ್ಮಾನವನ್ನು ಮಾಡಿದರು.

ಹೆಣ್ಣುಮಕ್ಕಳು ಹೋರಾಟ ಮಾಡಿ ಸಾರಾಯಿ ಅಂಗಡಿಗಳನ್ನು ಬಂದ್ ಮಾಡಿಸಿದರು. ಈ ಮಾರಾಟಗಾರರು ಏನೂ ಮಾಡಿದರೂ ಹೋರಾಟಗಾರರು ಬಗ್ಗಲಿಲ್ಲ. ಕೊನೆಗೆ ಅಂಗಡಿಗಳವರು ಸೇರಿಕೊಂಡು ಕುಡುಕ ಗಂಡಂದಿರಿಗೆಲ್ಲ ಪುಕ್ಕಟೆ ಶರಾಬು ಕೊಟ್ಟರು. ಹೀಗೆ 3-4 ಕಿ.ಮಿ. ದೂರದ ಊರಿನಲ್ಲಿ ಪುಕ್ಕಟೆಯಾಗಿ ಸಾರಾಯಿ ಕುಡಿಸಿ ಹೆಣ್ಣುಮಕ್ಕಳಿಗೆ ಹೊಡೆಸುವ ಕೆಲಸ ಮಾಡಿಸಿದರು. ಇದು ದಿನಾಲು ನಡೆಯುತಿತ್ತು. ಆ ಮೇಲೆ ಅವರಿಗೆ ಪೋಲೀಸ್ ರಕ್ಷಣೆ ಕೊಡಲು ನಾನೇ ಮುಂದಾಗಿ ಹೋದೆ, ಮತ್ತಿತರರಿಗೆ ದೂರು ಕೊಡಲಾಯಿತು. ಆದರೂ ಹೆಣ್ಣು ಮಕ್ಕಳಿಗೆ ಹೊಡೆತವು ತಪ್ಪಲಿಲ್ಲ. ಕುಡುಕ ಗಂಡರ ಹೆಂಡತಿಯರ ಕಷ್ಟ ಅವರಿಗೇ ಗೊತ್ತು, ಬೇರೆಯವರಿಗೆ ಗೊತ್ತಾಗುವುದಿಲ್ಲ. ಹೋದವಾರ ಒಬ್ಬ ತನ್ನ ಹೆಂಡತಿಗೆ ಹೊಡೆದು ಆ ಹೆಣ್ಣುಮಗಳು ಕೈಕಾಲು ಮುರಿದುಕೊಂಡು ದವಾಖಾನೆಗೆ ಸೇರಿದಳು. ತದನಂದರ ಆ ಬಗ್ಗೆ ಪ್ರತಿಭಟಿಸಲು ಡಿ.ಸಿ. ಕಛೇರಿ ಮುಂದೆ ಸಾವಿರಾರು ಹೆಣ್ಣುಮಕ್ಕಳು ಸೇರಿದರು. ನಮ್ಮ ಗ್ರಾಮವನ್ನು ಮಧ್ಯಪಾನ ಮುಕ್ತ ಗ್ರಾಮ ಎಂದು ಸಾರಬೇಕು, ಮದ್ಯ ಮಾರುವುದನ್ನು ನಿಲ್ಲಿಸಬೇಕು, ಇಲ್ಲವಾದಲ್ಲಿ ನಮ್ಮನ್ನೇ ಜೈಲಿಗೆ ಹಾಕಿ ಎಂದು ಪ್ರತಿಭಟಿಸಿದಾಗ ಡಿ.ಸಿ.ಯವರು ಏನೋ ಸಮಾಧಾನ ಮಾಡಿ ಕಳುಹಿಸಿದರು., ತದನಂತರ ಕುಡುಕರ ಪರವಾಗಿ ಕಂಟ್ರಾಕ್ಟರ್‌ಗಳು ಕುಡುಕರಿಗೆ ಕುಡಿಸಿ ಅವರಿಂದ ಒಂದು ಮನವಿಗೆ ಸಹಿ ಮಾಡಿಸಿದ್ದಾರೆ. ಅದರಲ್ಲಿ ಕುಡಿಯುವುದು ಕೂಡ ನಮ್ಮ ಹಕ್ಕು ಎಂದು ನಮೂದಿಸಿದ್ದಾರೆ. ನಮ್ಮ ಹಕ್ಕಿಗೆ ಚ್ಯುತಿ ಬರಬಾರದು. ನಾವು ದುಡಿಮೆಗಾರರಾಗಿರುವುದರಿಂದ ನಮಗೆ ಕುಡಿಯಲೇ ಬೇಕಾಗುತ್ತದೆ. ಇದು ನಮ್ಮ ಸಂವಿಧಾನಬದ್ಧವಾದ ಹಕ್ಕು ಎಂದು ಅದರಲ್ಲಿ ಬರೆದುಕೊಂಡಿದ್ದಾರೆ. ಮತದಾನ ಹಕ್ಕಿನಂತೆ ಕುಡಿಯುವುದು ಕೂಡ ನಮ್ಮ ಹಕ್ಕಾಗಿದ್ದು ಅದನ್ನು ಯಾರೂ ಕಸಿದುಕೊಳ್ಳಬಾರದು ಎಂದು ಹೇಳುತ್ತಾರೆ. ಆಮೇಲೆ ಯಾರು ಬಂದ್ ಮಾಡಿಸಿದರು ಅವರ ಮೇಲೆ ಕಂಪ್ಲೇಂಟನ್ನು ಕೊಟ್ಟರು. ಪೋಲೀಸರು ಅಂತಹವರನ್ನು ಬಡಿದಿದ್ದಾರೆ. ಆ ಕಾರಣದಿಂದಾಗಿ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಭಾಗ್ಯಲಕ್ಷ್ಮಿ ಮಹಿಳಾ

4.30 ಪಿ.ಎಂ.

ಮಂಡಲ ಹಾಗೂ ವ್ಯವಸಾಯ ಸಂಘಟನೆಗಳು, ಮಹಿಳಾ ಸಂಘಟನೆಗಳು ಸೇರಿ ಮಾನ್ಯ ಮುಖ್ಯಮಂತ್ರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಹಾಗೂ ನಮ್ಮ ಜಿಲ್ಲಾ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದು ಹೀಗಿದೆ.

> "ಸಿಂಡಗಿ ತಾಲ್ಲೂಕು ಹಂಚಿಗಿ ಗ್ರಾಮದ ಮಹಿಳಾ ಹಾಗೂ ಕೂಲಿ ಕಾರ್ಮಿಕ ಸಂಘಟನೆಗಳು, ಊರ ನಾಗರೀಕರು 18-10-2000ರಂದು ನಿಮ್ಮ ಕಛೇರಿಯ ಮುಂದೆ ನಾವೆಲ್ಲರೂ ಒಂದು ಮೇಲ್ಮಾಣಿಸಿದ ವಿಷಯದ ಬಗ್ಗೆ ಧರಣಿ ನಡೆಸಲಾಯಿತು. ಹಾಗೂ ಮನವಿ ಪತ್ರ ಕೊಡಲಾಯಿತು. ನಿಮ್ಮ ಆದೇಶದ ಪ್ರಕಾರ ಪೋಲಿಸ್ ರಕ್ಷಣೆ ಒದಗಿಸಿದ್ದೀರಿ, ಆದರೇ

ಪೋಲೀಸರೂ ನಿಷ್ಕ್ರಿಯರಾಗಿದ್ದಾರೆ. ಯಾಕೆಂದರೆ ಲೈಸನ್ಸ್ ಹೊಂದಿದವರ ಪ್ರಭಾವ ಪ್ರಬಲವಾಗಿ ಸಾರಾಯಿ, ಬ್ರಾಂದಿ ಕಳುವಿನಿಂದ ಮಾರುವುದು ನಿಂತಿಲ್ಲ. ಆ ಕಾರಣದಿಂದ ಬೇಸತ್ತ ಸಂಘಟನೆಗಳು ಕಣ್ಣಿದ್ದು ಕುರುಡರಂತೆ ಇದ್ದೇವೆ. ಆದ್ದರಿಂದ ಮಾನ್ಯರೇ ದಯಾಳಾದ ತಾವು ಈ ಮೇಲೆ ಕಾಣಿಸಿದ ನಮ್ಮ ಎಲ್ಲಾ ಬೇಡಿಕೆಗಳನ್ನು 15 ದಿವಸದೊಳಗೆ ಈಡೇರಿಸಿ ನಮ್ಮ ಗ್ರಾಮದಲ್ಲಿರುವ ಸರ್ಕಾರಿ ಸಾರಾಯಿ, ಬ್ರಾಂದಿ ಮಾರಾಟ ರದ್ದುಮಾಡಿ ಹಮ್ಮಿಗಿ ಗ್ರಾಮವನ್ನು ಮದ್ಯಪಾನಮುಕ್ತ ಗ್ರಾಮವೆಂದು ಘೋಷಿಸಲು ವಿನಂತಿಸುತ್ತೇವೆ. ಒಂದು ವೇಳೆ ನೀವು ಹೀಗೆ ಮಾಡದೇ ಇದ್ದರೆ ಉಪವಾಸ ಸತ್ಯಾಗ್ರಹ ಹೋರಾಟ ಪ್ರಾರಂಭಿಸುತ್ತೇವೆ."

ಎಂದು ಹೇಳಿದ್ದಾರೆ, ಸರ್ಕಾರದವರು ಲಿಲಾವು ಮಾಡಿಬಿಡುತ್ತೀರಿ ಮತ್ತೆ ಅವರು ರಕ್ಷಣೆ ಕೊಡು ಅಂತ ಡಿಸಿಯವರ ಹತ್ತಿರ ಹೋಗುತ್ತಾರೆ. ಮತ್ತೆ ಹೆಣ್ಣುಮಕ್ಕಳಿಗೆ ಜೈಲಿಗೆ ಹಾಕುತ್ತೀರೋ? ನನ್ನ ವಿನಂತಿ ಏನೆಂದರೆ ತಕ್ಷಣದಲ್ಲೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಆ ಗ್ರಾಮಕ್ಕೆ ಭೇಟಿ ಕೊಡಬೇಕು. ಮಾನ್ಯ ಗೃಹ ಸಚಿವರು ಅಲ್ಲಿಗೆ ಹೋಗಬೇಕು. ಅಲ್ಲಿಯ ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಬೇಕಾಗುತ್ತದೆ. ಆ ಗ್ರಾಮದ ಮಹಿಳೆಯರೆಲ್ಲ ಬಹಳ ಕಷ್ಟದಲ್ಲಿ ಬೆಂದಿದ್ದಾರೆ. ಗುಡಂದಿರು ಹೆಂಡತಿಯರಿಗೆ ದಿನಾ ಬಡಿಯುತ್ತಾರೆ, ನೋವಾಗುತ್ತದೆ ದಿನಾ ಕುಡಿಯುವುದು, ಹೋಗುವುದು, ಬಡಿಯುವುದು. ಆದರೂ ಬಗ್ಗಿಲ್ಲ ಅವರು. ಏನಾದರೂ ಸರಿ, ನಾವು ಬೇಕಾದರೆ ಪ್ರಾಣ ಕಳೆದುಕೊಳ್ಳುತ್ತೇವೆ ಎನ್ನುತ್ತಾರೆ. ಆದ್ದರಿಂದ ತಕ್ಷಣ ಸರ್ಕಾರ ಆ ಗ್ರಾಮ ಮದ್ಯಮುಕ್ತ ಎಂದು ಡಿಕ್ಲೇರ್ ಮಾಡಬೇಕು, ಮಹಿಳೆಯರಿಗೆಲ್ಲ ರಕ್ಷಣೆ ಕೊಡಬೇಕು.

(vii) ರಾಜ್ಯದಲ್ಲಿ ದುರ್ಬಲರಿಗೆ ಸರ್ಕಾರದಿಂದ ನೀಡುವ ಸಬ್ಸಿಡಿ ಹಣ ದುರುಪಯೋಗಪಡಿಸಿಕೊಳ್ಳುತ್ತಿರುವುದು.

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) :— ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ಸರ್ಕಾರ ಕೊಡುವ ಟ್ರಾಕ್ಟರ್, ಹೊಲಿಗೆ ಮೆಷಿನುಗಳು ಮತ್ತೆ ತೆಂಗಿನ ಸಸಿ ಹಾಗೂ ಇತರೆ ಮರ ಗಿಡ ಸಸಿ ಕೊಡಲಾಗುತ್ತದೆ. ಇಲ್ಲಿ ಕೊಡುತ್ತೇವೆ, ಅಲ್ಲಿ ಮಾರಿಕೊಳ್ಳುತ್ತಾರೆ. ಹಿಂದೆ ಎಸ್ಸಿ/ಎಸ್ಟಿ ಜನರಿಗೆ ಜಮೀನ ಕೊಟ್ಟಾಗ ಅದನ್ನು ವಾಪಸ್ ತೆಗೆದುಕೊಂಡು ಸರ್ಕಾರ ಹೇಗೆ ವಹಿಸಿಕೊಂಡಿತ್ತೋ ಅದೇ ರೀತಿ ಒಂದು ಕಾನೂನು ಮಾಡದೇ ಹೋದರೆ ನಾವೇನು 15 ಸಾವಿರ ಸಬ್ಸಿಡಿ ಕೊಡುತ್ತೇವೆ ಅದರ ಸದುಪಯೋಗವಾಗುವುದಿಲ್ಲ ಮತ್ತು ಅದನ್ನು ಮಾರಿಬಿಡುತ್ತಾರೆ. ಕೊನೆಯ ಪಕ್ಷ ಈ ಬಗ್ಗೆ ಒಂದು ನಿಬಂಧನೆ ಹಾಕಬೇಕು. ಆವರದನ್ನು ಯಾರು ಕೊಳ್ಳುವನೋ ಅವನಿಂದ ಅದನ್ನು ಸರ್ಕಾರ ವಾಪಸ್ ಪಡೆದುಬಿಡಬೇಕು. ನಾವು